MYSORE LEGISLATIVE ASSEMBLY

FOURTH DAY.

Tuesday, 8th December 1959.

The House met in the Assembly Hall, Vidhana Soudha, Bangalore, at One of the Clock.

MR. DEPUTY SPEAKER (SRI L. H. THIMMA BOVI, B.A.) in the Chair.

STARRED QUESTIONS

(to which oral answers were given).

Allotment of N.E.S. Blocks.

*Q.—6. Sri E. NARAYANA GOWDA (Bangarpet).—

Will the Government be pleased to state:—

(*a*) the number of N.E.S. Blocks allotted in the constituencies of the Opposition Members, out of ten blocks sanctioned by the Government recently;

(*b*) whether the majority of these Blocks have been allotted only to the constituencies of the Ministers;

(*c*) whether any representations have been received by the Government stating that the present allotment is unjust?

A.—Sri H. C. LINGA REDDY (Deputy Minister for Planning and Development).—

(*a*) Three.

(*b*) The selection of taluks for allotment of blocks has been done all through on an objective basis and the present distribution of ten blocks has been done in the normal course of allotments. All taluks will be covered by 1963.

(*c*) No.

ಶ್ರೀ ಇ. ನಾರಾಯಣಗೌಡ.—ತಾವು ಇಲ್ಲಿ ತಿಳಿಸಿರತಕ್ಕ ಮೂರು ಬ್ಲಾಕ್‌ಗಳನ್ನು ಯಾವ ಯಾವ ಸ್ಥಳದಲ್ಲಿ ಕೊಡಲಾಗಿದೆ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಕೂಡ್ಲಿಗಿಯಲ್ಲಿ ಎರಡು ಬ್ಲಾಕುಗಳು ಮತ್ತು ಹಾನಗಲ್ಲಿಗೆ ಒಂದು ಬ್ಲಾಕು.

ಶ್ರೀ ಜಿ. ಶಿವಪ್ಪ.—ಈ ಬ್ಲಾಕುಗಳನ್ನು ಹಂಚಲು ಕಾಂಗ್ರೆಸ್ಸಿನವರು ಇರತಕ್ಕ ಬ್ಲಾಕ್ ಯಾವುದು, ನಾನ್-ಕಾಂಗ್ರೆಸ್ ಇರತಕ್ಕ ಬ್ಲಾಕ್ ಯಾವುದು ಎಂಬುದರ ಆಧಾರದ ಮೇರೆ ಹಂಚುತ್ತೀರೋ ಅಥವಾ ಅದಕ್ಕೇನಾದರೂ ಬೇರೆ ತತ್ತ್ವಗಳಿವೆಯೋ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಕಾಂಗ್ರೆಸ್ ನಾನ್ ಕಾಂಗ್ರೆಸ್ ಎಂಬುದರ ಆಧಾರದ ಮೇರೆ ಹಂಚುತ್ತಿಲ್ಲ. ಹಂಚತಕ್ಕ ತತ್ತ್ವಗಳೇ ಬೇರೆ ಇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆ ತತ್ತ್ವಗಳು ಯಾವುವು?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಅವು ಯಾವುವೆಂಬುದನ್ನು ಈಗಾಗಲೇ ಅನೇಕಾವರ್ತಿ ಹೇಳಿದ್ದೇನೆ. ಬೇಕೆಂದರೆ ಇನ್ನೂ ಒಂದಾವರ್ತಿ ತಿಳಿಸುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತುಮಕೂರು ಜಿಲ್ಲೆಯಲ್ಲಿ ನುತ್ತ ಏಳು ತಾಲ್ಲೂಕುಗಳಿಗೆ ಬ್ಲಾಕುಗಳನ್ನು ಕೊಟ್ಟು ಮಧ್ಯೇ ಇರತಕ್ಕ ನಬ್ ಡಿವಿಜ್ ಸ್ಥಳವಾದ ತಿಪಟೂರಿಗೆ ಈ ಬ್ಲಾಕನ್ನು ಕೊಡದಿರುವುದು ತುಂಬಾ ಅನ್ಯಾಯವೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಅದು ತಪ್ಪು ಅಭಿಪ್ರಾಯ. ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಪ್ರಜಾನಂಖ್ಯೆಯಿರುತ್ತದೆ; ಆ ಜಿಲ್ಲೆಯ ವಿಸ್ತೀರ್ಣ ವೆಷ್ಟು ಅಲ್ಲಿರತಕ್ಕ ಪರಿಸ್ಥಿತಿ ಏನು, ಹೀಗೇ ಇನ್ನೂ ಅನೇಕ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ತುಮಕೂರು ಜಿಲ್ಲೆಯ ಏಳು ತಾಲ್ಲೂಕುಗಳಿಗೆ ಹತ್ತೂ ವರೆ ಬ್ಲಾಕುಗಳನ್ನು ಕೊಟ್ಟಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಡೆಪ್ಯುಟಿ ಕಮಿಷನರು ಮೂರಾವರ್ತಿ ಶಿಫಾರ್ಸು ಮಾಡಿದ್ದಾಗ್ಯೂ ಸರ್ಕಾರದವರು ತಿಪಟೂರಿಗೆ N.E.S. ಬ್ಲಾಕನ್ನು ಕೊಡದಿರುವುದು ತುಂಬಾ ಅನ್ಯಾಯವೆಂದು ಭಾವಿಸುವುದಿಲ್ಲವೇ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಆ ತಾಲ್ಲೂಕು ಕೇವಲ ಮಧ್ಯ ಪ್ರದೇಶದಲ್ಲಿ ಹಾಗೇ ಉಳಿದಿದೆ ಎನ್ನುವ ತಕ್ಕ ಒಂದು ಕಾರಣದ ಮೇರೆ ಅಲ್ಲಿಗೆ ಬ್ಲಾಕನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಲ್. ನರಸಿಂಹಯ್ಯ.—ತುಮಕೂರು ಜಿಲ್ಲೆಗೆ ಹತ್ತು ತಾಲ್ಲೂಕುಗಳ ಪೈಕಿ ಏಳು ತಾಲ್ಲೂಕ್ ಗಳಿಗೆ ಬ್ಲಾಕುಗಳನ್ನು ಕೊಟ್ಟಿರುವುದರಿಂದ ಈ ಜಿಲ್ಲೆಗೆ ನೀಡಿದ 70ರಷ್ಟು ಭಾಗಕ್ಕೆ ಬ್ಲಾಕುಗಳನ್ನು ಕೊಟ್ಟಂತಾಗಲಿಲ್ಲವೇ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಹೌದು.

ಶ್ರೀ ಜಿ. ಎಸ್. ಪುಟ್ಟಣ್ಣಿ. -ತುಮಕೂರು ಜಿಲ್ಲೆಯಲ್ಲಿ ತಾವು ಕೊಟ್ಟಿರುವ ಏಳು ಬ್ಲಾಕುಗಳಲ್ಲಿ ನಾಲ್ಕು ಕ್ಷೇತ್ರಗಳು ಮಂತ್ರಿಗಳ ಕ್ಷೇತ್ರಕ್ಕೆ ಸೇರಿರುತ್ತವೆಯಲ್ಲವೇ ?

ಶ್ರೀ ಎಚ್. ಸಿ ಲಿಂಗಾರೆಡ್ಡಿ. ತತ್ಪಾಧಾರದ ಮೇಲೆ ಕೊಡಲಾಗಿದೆಯೇ ಹೊರತು ಮಂತ್ರಿಗಳ ಕ್ಷೇತ್ರವೆಂದೇನೂ ಕೊಟ್ಟಿಲ್ಲ.

ಶ್ರೀ ಜಿ. ಎಸ್. ಪುಟ್ಟಣ್ಣಿ.—ತಾವು ಏಳು ಬ್ಲಾಕುಗಳನ್ನು ಯಾವ ಯಾವ ಸ್ಥಳಕ್ಕೆ ಕೊಡಲಾಗಿದೆಯೆಂಬುದನ್ನು ತಿಳಿಸುವಿರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಹಾನಗಲ್ಲು, ಬ್ಯಾಡಗಿ, ಕೂಡ್ಲಿಗಿ, ಕೊರಟಗೆರೆ, ಅಫ್‌ಜಲ್‌ಪುರ, ಕೃಷ್ಣರಾಜನಗರ ಮತ್ತು ಜಮಖಂಡಿ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ತತ್ತ್ವಗಳನ್ನು ಕೈಬಿಟ್ಟು ನಿಮ್ಮ ಮನಸ್ಸಿಗೆ ಬಂದ ಹಾಗೆ ಹಂಚಿಕೆ ಮಾಡಿದ್ದೀರಲ್ಲವೇ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಇಲ್ಲ.

Sri J. P. SARWESH.—May I know the numbes of blocks sanctioned for Hyderabad area ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಹೈದರಾಬಾದಿನಲ್ಲಿ ಅಫ್‌ಜಲ್‌ಪುರ ಒಂದೇ ಎಂದು ಕಾಣುತ್ತದೆ.

ಶ್ರೀ ಟಿ. ಹನುಮಯ್ಯ.—ಕೇಳಿರತಕ್ಕ ಪ್ರಶ್ನೆಗೆ ತಕ್ಕಷ್ಟು ಉತ್ತರ ಕೊಡದೆ ಹೆಚ್ಚು ಉತ್ತರ ಕೊಟ್ಟಿರುವುದಕ್ಕೆ ಕಾರಣವೇನು ! 1963 ನೆಯ ಸಾಲಿಗೆ ಎಲ್ಲಾ ತಾಲ್ಲೂಕುಗಳಿಗೂ ಕೊಡುತ್ತೇವೆಂಬ ಉತ್ತರ ಹೆಚ್ಚಲ್ಲವೇ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ನಾವು ಮಾಡಿರತಕ್ಕ ಕೆಲಸಗಳು ಅಷ್ಟು ಚೆನ್ನಾಗಿರುವುದರಿಂದ ಹಾಗೆ ತಿಳಿಸಲಾಗಿದೆ.

Sri A. R. BADRI NARAYAN.—Are the Government aware that even in respect of the constituencies of the ruling party members, there is a grievance that a sufficient number of blocks have not been given to them ?

Sri H. C. LINGA REDDY.—It is true that there is a very great demand for these blocks because the work is done so well.

Sri A. R. KARISIDDAPPA.—May I know the number of taluks and Blocks that are covered and yet to be covered by N.E.S.?

Sri H. C. LINGA REDDY.—Out of 170 taluks we have already covered 120 taluks; out of 268 blocks 163 blocks we have covered; 105 more in regard to blocks and 50 in regard to taluks have to be covered.

Smt. VIJAYA RAGHAVENDRA RAO.—Is it not a fact that the Block allotted to Hyderabad Karnatak area is given to the Minister's constituency ?

Sri H. C. LINGA REDDY.—No. I have already answered that question.

Sri RAMAKRISHNA HEGDE.—May I know how many blocks were allotted to North Kanara District during the last 2 years ?

Sri H. C. LINGA REDDY.—I want notice for that.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಿಪಟೂರು ಈ ಸಾರಿಯ ಲಿಸ್ಟಿನಲ್ಲಿ ಸೇರಿದೆಯೇ ? ಅಥವಾ ಇದನ್ನು ಸೇರಿಸಲು ಅಧಿಕಾರಿಗಳು ಎಷ್ಟು ಸಾರಿ ಶಿಫಾರಸು ಮಾಡಿದ್ದಾರೆ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಅದನ್ನು ನೋಡಬೇಕು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಇದನ್ನು ನೋಡಲು ಸಬ್‌ಡಿವಿಜನ್ನು ಆಫೀಸರಿಗೆ ಜೀಪಿಗಾಗಿ ಹೆಚ್ಚಿನ ಪೆಟ್ರೋಲ್ ಖರ್ಚಾದರೂ ಚಿಂತೆಯಿಲ್ಲ. ಇದನ್ನು ತೀವ್ರವಾಗಿ ಗಮನಿಸಿ ಮುಂದಿನ ಸಾರಿಯಾದರೂ ಇಲ್ಲಿಗೆ ಒಂದು ಬ್ಲಾಕನ್ನು ಕೊಡುವ ಏರ್ಪಾಡು ಮಾಡಲಾಗುತ್ತದೆಯೇ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ತೆಗೆದುಕೊಳ್ಳುವ ಪ್ರಯತ್ನವನ್ನು ಮಾಡಲಾಗುತ್ತದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಮದ್ದೂರು, ಕುಣಿಗಲ್, ಮಾಗಡಿ, ಕಾನಕಾನ ಹಳ್ಳಿ ಈ ಎಲ್ಲ ತಾಲ್ಲೂಕುಗಳಿಗೂ ಬ್ಲಾಕುಗಳನ್ನು ಕೊಟ್ಟು ಚನ್ನಪಟ್ಟಣ ತಾಲ್ಲೂಕಿಗೆ ಕೊಡದೇ ಇರಲು ಕಾರಣವೇನು ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಮುಂದೆ ಕೊಡುವಾಗ ಪರಿಶೀಲಿಸಿ ಕೊಡಲಾಗುತ್ತದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಪ್ರತಿ ಸಾರಿಯೂ ರೆಪ್ರೆಸೆಂಟೇಷನ್ನುಗಳನ್ನು ಕೊಡುತ್ತಿದ್ದೇವೆ. ಇದರ ನುತ್ತ ಇರುವ ಕಡೆಗಳಿಗೆಲ್ಲ ಬ್ಲಾಕುಗಳನ್ನು ಕೊಟ್ಟಿದ್ದೀರಿ. ಅಲ್ಲಿ ಕಾಂಗ್ರೆಸ್ಸಿನವರು ಬಾರದೇ ನಾನು ಚುನಾವಣೆಯಾಗಿ ಬಂದಿರುತ್ತೇನೆಂದು ಕೊಡಕೂಡದೆಂದು ಮಾಡಿದ್ದೀರಾ ಅಥವಾ ಇಲ್ಲಿಯ ವರೆಗೂ ಕೊಡದಿರಲು ಕಾರಣವೇನು ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಈಗಾಗಲೇ ಉತ್ತರವನ್ನು ಹೇಳಿದ್ದೇನೆ. ಚನ್ನಪಟ್ಟಣ ಹೇಗೆ ಊರುಗಳ ಮಧ್ಯ ಇದೆಯೋ ಇತರ ಕಡೆಗಳಲ್ಲಿಯೂ ಬ್ಲಾಕುಗಳಿಲ್ಲದಿರುವಂತಹ ಊರುಗಳೂ ಇವೆ. ಆದರೆ ಕೇಂದ್ರ ಸರ್ಕಾರದವರು ನಮಗೆ ಕೊಡುವಂತಹ ಬ್ಲಾಕುಗಳನ್ನು ಕೆಲವು ಸ್ಥಳಗಳಿಗೆ ಅಕ್ಟೋಬರ್ ಮತ್ತು ಏಪ್ರಿಲ್ ತಿಂಗಳುಗಳಲ್ಲಿ ಕೊಡುವ ಏರ್ಪಾಡನ್ನು ಮಾಡಿಕೊಂಡಿದ್ದೇವೆ. ಬ್ಲಾಕುಗಳಿಗಾಗಿ ಎಷ್ಟೋ ರಿಪ್ರೆಸೆಂಟೇಷನ್ನುಗಳು ಬಂದಿವೆ. ಅವನ್ನೆಲ್ಲ ಪರಿಶೀಲಿಸಿ ಕೊಡಲಾಗುತ್ತಿದೆ. ಆದರೆ ಒಂದೇ ಸಾರಿ ಎಲ್ಲ ಸ್ಥಳಗಳಿಗೂ ಕೊಡುವುದಕ್ಕೆ ಸಾಧ್ಯವಿಲ್ಲ. ಅದರಂತೆ ಇಲ್ಲಿಯ ವರೆಗೆ ಚನ್ನಪಟ್ಟಣಕ್ಕೂ ಸಿಕ್ಕಿಲ್ಲ.

ಶ್ರೀ ಬಿ. ವಿ. ದೇಸಾಯಿ.—ಹೋದ ಸಾರಿ ಹೈದರಾಬಾದು ಕರ್ನಾಟಕದಲ್ಲಿ ರಾಯಚೂರು ಭಾಗಕ್ಕೆ ಒಂದು ಬ್ಲಾಕನ್ನು ಕೊಡುತ್ತೇವೆಂದು ಹೇಳಲಾಗಿತ್ತು. ಹಾಗೆ ಕೊಡದಿರಲು ಕಾರಣವೇನು ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ರಾಯಚೂರು ಜಿಲ್ಲೆಯಲ್ಲಿ ಯರ್‌ಬುರ್ಗಾಕ್ಕೆ ಕೊಡಲಾಗಿದೆ.

Mr. DEPUTY SPEAKER.—Question No. 10, Sri G. Sivappa.

Sri H. M. CHANNABASAPPA.—I would like to request that this question may be taken up a few days later because the figures are to be checked up.

Sri G. SIVAPPA.—I am agreeable to that.

Selection of Site for the Construction of Upper Krishna Project.

*Q.—17. Sri G. SIVAPPA (Chitradurga).—

Will the Government be pleased to state :—

(*a*) whether the Minister for P.W.D. gave a press statement in the first instance to the effect that the State Standing Technical Advisory Committee has inspected the alternative sites for the construction of Upper Krishna Project and have recommended Narayanapura as feasible one and on their advice, a decision has been taken to construct a project at Narayanapura ;

(*b*) whether it is a fact that the Minister for P.W.D. has given a press statement recently to the effect that the above project would be constructed at Kamala Dinne which would cause the submersion of Sangameswara temple ;

(*c*) what are the recommendations of the Technical Advisory Committee ?

*A.—Sri H. M. CHANNABASAPPA (Minister for Public Works and Electricity).—

(*a*) There is no record of such a statement. It is, however, a fact that the S.T.A.C. approved of the Narayanapur site and a Project Report also was prepared on that basis.

(*b*) What was stated was that this alternative was being considered among others.

(*c*) *Vide* reply to (*a*).

Sri G. SIVAPPA.—My question was "whether the Minister for P.W.D. gave a press statement in the first instance to the effect that the State Standing Technical Advisory Committee has inspected the alternative sites f the construction of Upper Krishr Project and have recommende Narayanapura as feasible one and o their advice, a decision has been take to construct a project at Narayan pura" and for that the reply is "the is no record of such a statement."

†ಶ್ರೀ ಪೆಚ್. ಎಂ. ಚನ್ನಬಸಪ್ಪ.—ರಿಕಾರ್ಡಿನ ಎಂದು ಹೇಳಿಲ್ಲ. ಪತ್ರಿಕೆಯಲ್ಲಿ ಪ್ರಕಟವಾದ ಪ್ರಕಟ ಎಂದು ಹೇಳಿದೆ.

ಶ್ರೀ ಜಿ. ಶಿವಪ್ಪ.—ಪತ್ರಿಕೆಯಲ್ಲಿ ಬಂದಿರತ ಪ್ರಕಟಣೆ ಏನು ? ನೆನ್ನೆಯ ದಿವಸ ತಾವು ಮಾತನಾ ವಾಗ ಸ್ಯಾಜೆಕ್ಷನ್ನು ಕಟ್ಟುತ್ತೇವೆ ಎನ್ನುವ ಬ ಹೇಳುತ್ತ, ಇದನ್ನು ತೀರ್ಮಾನಮಾಡುತ್ತೇವೆಂ ಹೇಳಲಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತೀರ್ಮಾ ಮಾಡುತ್ತೇವೆಂದು ತಿಳಿಸಲಿಲ್ಲ. ಪರಿಶೀಲನೆಮಾ ಆಲೋಚನೆ ಮಾಡಲಾಗುತ್ತದೆ ಎಂದು ಹೇಳಿದ್ದೇ It may be that I had disclosed th fact, but the press statement referr to in the question is not on record.

Sri G. SIVAPPA.—Is it not a fa that later on the Minister gave anoth press statement that it would be take up at Kamala Dinne? The Minist was definite while making a publ speech that this project would be take up at Kamala Dinne.

Sri H. M. CHANNABASAPPA—was not a public speech, but it w press statement and I have got a of it with me.

ಶ್ರೀ ಎಸ್. ವೈ. ಪಾಟೀಲ್. ಬಿಜಾಪುರ ಜಿ ಅನುಕೂಲವಾಗತಕ್ಕ ಯಾವುವಾದರೂ ಯೋಜನೆಗ ತಮ್ಮ ಮುಂದೆ ಇವೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇವೆ. ನಾಲ್ಕೈದ ಸ್ಕೀಮುಗಳಿವೆ. ಇವುಗಳೆಲ್ಲದರಿಂದ ಬಿಜಾಪುರ ಜಿಲ್ಲೆ ನುಮಾರು ಎರಡು ಲಕ್ಷದ ಐವತ್ತು ಸಾವಿರ ಎಕ ಗಳಷ್ಟು ಭೂಮಿಗೆ ಅನುಕೂಲವಾಗಲು ಸಾಧ್ಯವಾ ತ್ತದೆ.

ಶ್ರೀ ಪಿ. ಜಿ. ಸಿದ್ದಾಂತಿ.—ಕಮಲದಿನ್ನಿಯ ಬ ಈ ಯೋಜನೆಯನ್ನು ಕಟ್ಟುವುದರಿಂದ ಖರ್ಚು ಕಡಿ ಯಾಗುತ್ತದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕಮಲದಿನ್ನಿಯ ಬಳಿ ಕಟ್ಟಿದರೆ ಖರ್ಚು ಕಡಮೆಯಾಗುತ್ತದೆಯೇ ಇಲ್ಲ ಎನ್ನುವುದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದಾ ಮತ್ತು ಇನ್ನೂ ಹಲವಾರು ಯೋಜನೆಗಳನ ಆಲೋಚನೆಮಾಡುತ್ತಿದ್ದಾರೆ. ಅವುಗಳಲ್ಲಿ ಯಾವು ಕಡಮೆಯಾಗುತ್ತದೆ, ಯಾವುದು ಹೆಚ್ಚಾಗುತ್ತ ಎನ್ನುವುದನ್ನೆಲ್ಲ ತಜ್ಞರು ಪರಿಶೀಲನೆ ನಡೆಸುತ್ತಿದ್ದಾ

Sri C. K. RAJAIAH SETTY.—M I know whether the State Standi Technical Advisory Committee ha also given any alternative sites ?

† Indicates that the remarks or speeches have not been revised by the member concerned.